





ಆಭರಣಗಳ ಪಟ್ಟಿಗೆ ಸೇರ್ಪಡೆಗೊಂಡಿವೆ. ಇವುಗಳಿಗೆ ವಿವಿಧ ಬಗೆಯ ಬೀಡ್ಸ್‌ಗಳನ್ನು ಜೋಡಿಸಿ ಮತ್ತು ಬಣ್ಣಗಳನ್ನು ಕೊಡುವುದರ ಮೂಲಕ ಇವನ್ನು ಇನ್ನೂ ಆಕರ್ಷಕವನ್ನಾಗಿಸಬಹುದು.

ಇನ್ನು ಸೀ ಶೆಲ್‌ಗಳಿಂದ ತಯಾರಾದ ಬ್ರೇಸ್‌ಲೆಟ್‌ಗಳು ಸಿಂಗಲ್ ಲೇಯರ್ ಮತ್ತು ಮಲ್ಟಿ ಲೇಯರ್ ಎರಡೂ ಬಗೆಗಳಲ್ಲಿ ದೊರೆಯುತ್ತವೆ. ಇವುಗಳು ವಿವಿಧ ಬಣ್ಣಗಳ ಶೆಲ್ಲುಗಳಿಂದಲೂ ತಯಾರಿಸಲ್ಪಟ್ಟಿರುತ್ತವೆ. ಇವುಗಳಿಗೆ ಸಣ್ಣ ಸಣ್ಣ ಟ್ಯಾಸಲ್ಲುಗಳನ್ನು ಅಳವಡಿಸಿ ಇನ್ನೂ ಸುಂದರವಾದ ಲುಕ್ ಕೊಡಬಹುದು. ಸಮುದ್ರದಲ್ಲಿ ದೊರೆಯುವ ಒಂದೇ ತೆರನಾದ ಶೆಲ್ಲುಗಳನ್ನು ಬಳಸಿ ಸುಂದರವಾದ ಪೆಂಡೆಂಟ್ ಸೆಟ್ಟುಗಳನ್ನು ಕೂಡ ತಯಾರಿಸಬಹುದಾಗಿದೆ. ವಿವಿಧ ಗಾತ್ರಗಳಲ್ಲಿ ದೊರೆಯುವ ಈ ಬಗೆಯ ಪೆಂಡೆಂಟುಗಳು ಸುಂದರವಾಗಿಯೂ ಮತ್ತು ವಿಶೇಷವಾಗಿಯೂ ಇರುತ್ತವೆ. ಮೆಟಲ್ ಚೈನುಗಳೊಂದಿಗೆ ಅಥವಾ ಥ್ರೆಡ್‌ನೊಂದಿಗೆ ಪೆಂಡೆಂಟುಗಳನ್ನು ಧರಿಸಬಹುದು. ಈ ತರಹದ ಪೆಂಡೆಂಟ್‌ಗಳನ್ನು ಲೆಹೆಂಗಾ, ಲಾಂಗ್ ಸ್ಕರ್ಟ್‌ಗಳು ಮತ್ತು ಸೀರೆಗಳಿಗೆ ಮ್ಯಾಚ್ ಮಾಡಿ ಧರಿಸಬಹುದು. ವಿಶೇಷವಾದ ಶಂಖವನ್ನು ಲಾಂಗ್ ಚೈನ್‌ಗೆ ಅಳವಡಿಸಿ ಧರಿಸಬಹುದು. ಇನ್ನು ನೆಕ್ಲೇಸ್‌ಗಳಲ್ಲಿಯೂ ಚಿಪ್ಪುಗಳನ್ನು ಬಳಸಬಹುದು. ಒಂದೇ ತರಹದ ಶೆಲ್ಲುಗಳನ್ನು ಜೋಡಿಸಿ ಅವುಗಳಿಗೆ ನಿಮ್ಮ ಉಡುಪಿಗೆ ಮ್ಯಾಚ್ ಆಗುವ ಬಣ್ಣಗಳನ್ನು ನೀಡುವುದರಿಂದ ಅವನ್ನೂ ಇನ್ನೂ ಆಕರ್ಷಕವಾಗಿಸಬಹುದು.

ಪಾರ್ಟಿಗಳಿಗೆ ಹೋಗುವಾದ ತ್ರಿಫೋರ್ತ್ ಪ್ಯಾಂಟುಗಳ ಜೊತೆಗೆ ಆಂಕ್ಲೆಟ್‌ಗಳನ್ನು ಧರಿಸಿದರೆ ಇನ್ನೂ ಸುಂದರವಾಗಿ ಕಾಣಬಹುದು. ಆಂಕ್ಲೆಟ್‌ಗಳು ವಿವಿಧ ಬಣ್ಣಗಳಲ್ಲಿ ದೊರೆಯುವುದರಿಂದ ಉಡುಪಿಗೆ ತಕ್ಕಂತೆ ಧರಿಸಿ ಟ್ರೆಂಡಿ ಲುಕ್ ಪಡೆಯಬಹುದು. ಮಾರುಕಟ್ಟೆಯಲ್ಲಿ ದೊರೆಯುವ ಮೆಟಲ್ ಬಳೆಗಳು ಅಥವಾ ಗಾಜಿನ ಬಳೆಗಳಿಗೆ ವಿವಿಧ ಆಕೃತಿಯ ಶೆಲ್ಲುಗಳನ್ನು ಬಳಸಿ ಸುಂದರವಾದ ಬಳೆಗಳನ್ನು ತಯಾರಿಸಬಹುದಾಗಿದೆ. ಈ ತರಹದ ಬಳೆಗಳು ಮಾಡರ್ನ್ ಉಡುಪುಗಳೊಂದಿಗೆ ಚೆನ್ನಾಗಿ ಒಪ್ಪುತ್ತವೆ. ಕಡಗದಂತಹ ಬಳೆಗಳೂ ಕೂಡ ಈ ಬಗೆಯಲ್ಲಿ ದೊರೆಯುತ್ತವೆ. ಕಿವಿಯಾಭರಣಗಳಲ್ಲಿ ಸಾಕಷ್ಟು ವೆರೈಟಿ ದೊರೆಯುತ್ತಿದ್ದು ಸ್ಟಡ್ಡುಗಳು, ಹ್ಯಾಂಗಿಂಗುಗಳು, ರಿಂಗುಗಳಲ್ಲಿ ಈ ತರಹದ ಶೆಲ್ಲುಗಳನ್ನು ಬಳಸಿ ಅವಕ್ಕೆ ಆ್ಯಂಟಿಕ್ ಲುಕ್ಕನ್ನು ನೀಡಲಾಗುತ್ತಿದೆ. ಹಾಗೇ ಶಂಖಗಳನ್ನು ಬಳಸಿದ ಕಿವಿಯಾಭರಣ, ಲಾಂಗ್ ಹ್ಯಾಂಗಿಂಗ್ ಕಿವಿಯಾಭರಣಗಳು ಹೀಗೆ ಅನೇಕ ಬಗೆಗಳ ಸೀಶೆಲ್ ಆಭರಣಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ಸುಂದರವಾಗಿರುವ ಈ ಬಗೆಯ ಆಭರಣಗಳು ಹೊಸ ಸ್ಟೈಲ್ ಸ್ಟೇಟ್‌ಮೆಂಟನ್ನೇ ಸೃಷ್ಟಿಸಿವೆ. ಹಾಗೇ ಉಡುಪುಗಳನ್ನು ಆಕರ್ಷಕಗೊಳಿಸಲು ಈ ಸೀಶೆಲ್ಲುಗಳನ್ನು ಬಳಸಲಾಗುತ್ತಿದೆ.

ದುಪಟ್ಟಾಗಳ ಅಂಚಿಗೆ ಒಂದೇ ತೆರನಾದ ಕಪ್ಪೆಚಿಪ್ಪು ಬಳಸುವುದರಿಂದ ಅದಕ್ಕೆ ಒಂದು ಗ್ರ್ಯಾಂಡ್ ಲುಕ್ ನೀಡಲಾಗುತ್ತಿದೆ. ಇಷ್ಟೇ ಅಲ್ಲದೆ ಇವನ್ನು ಸೀರೆಯ ಅಂಚಿಗೂ ಬಳಸಲಾಗುತ್ತಿದೆ. ಮಹಿಳೆಯರ ಶೂಗಳಲ್ಲಿಯೂ ಕೂಡ ಸೀಶೆಲ್ಲುಗಳನ್ನು ಬಳಸಲಾಗುತ್ತಿದೆ. ಆ್ಯಂಟಿಕ್ ಲುಕ್ಕನ್ನು ಹೊಂದಿರುವ ಶೂಗಳನ್ನು ಚಿಕ್ಕ ಚಿಕ್ಕ ಶೆಲ್ಲುಗಳನ್ನು ಬಳಸಿ ಅಲಂಕಾರ ಮಾಡಲಾಗಿರುತ್ತದೆ. ಇವುಗಳೂ ಕೂಡ ಸಧ್ಯದ ಟ್ರೆಂಡ್ ಎನಿಸುತ್ತವೆ.

ಈ ಸೀಶೆಲ್‌ಗಳು ಬರೀ ಆಭರಣ ತಯಾರಿಕೆಗೆ ಮಾತ್ರವಲ್ಲ ಬ್ಯಾಗುಗಳನ್ನು ಮತ್ತು ಪರ್ಸ್‌ಗಳನ್ನು ಅಲಂಕರಿಸಲು ಬಳಸಲಾಗುತ್ತಿದೆ. ಇವುಗಳು ಎವರ್‌ಗ್ರೀನ್ ಸ್ಟೈಲ್ ಎನಿಸಿವೆ. ಇತ್ತೀಚೆಗೆ ಈ ಬಗೆಯ ಫ್ಯಾಷನೇಬಲ್ ಬ್ಯಾಗುಗಳು ಮತ್ತೆ ಟ್ರೆಂಡಿಗೆ ಬಂದಿವೆ ಎನ್ನಬಹುದಾಗಿದೆ. ಹ್ಯಾಂಡ್ ಬ್ಯಾಗ್‌ಗಳೂ, ಕ್ಲಚ್‌ಗಳು, ಪರ್ಸ್‌ಗಳು... ಹೀಗೆ ಎಲ್ಲಾ ಬಗೆಯ ಬ್ಯಾಗುಗಳಲ್ಲಿಯೂ ಇವುಗಳನ್ನು ಬಳಸಲಾಗುತ್ತಿದೆ. ಸೀಶೆಲ್‌ಗಳಿಂದ ಗೃಹಾಲಂಕಾರಿಕ ವಸ್ತುಗಳನ್ನೂ ಕೂಡ ತಯಾರಿಸಲಾಗುತ್ತಿದೆ. ಸಣ್ಣ ಸಣ್ಣ ಶಂಖಗಳು, ವೈವಿಧ್ಯವಾದ ಡಿಸೈನುಗಳುಳ್ಳ ಶೆಲ್ಲುಗಳನ್ನು ಬಳಸಿ ಅಲಂಕಾರಿಕ ಕನ್ನಡಿಗಳು, ವಾಲ ಹ್ಯಾಂಗಿಂಗುಗಳು, ಬಾಗಿಲ ತೋರಣಗಳು ಇತ್ಯಾದಿಗಳನ್ನು ತಯಾರಿಸಬಹುದು.

ಪುಟ್ಟ ಹುಡುಗಿಯರಿಂದ ಹಿಡಿದು ಮುದುಕಿಯವರೆಗೂ ಕಡಲ ತಡಿಯ ಶಂಖ, ಚಿಪ್ಪುಗಳನ್ನು ಬಳಸಿ ತಯಾರಿಸಿದ ಒಡವೆಗಳನ್ನು ಇಷ್ಟಪಡುತ್ತಾರೆ. ಇದೊಂದು ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.